ಸಿ.ಮಿಸ್. 359/2025 ಪಿಡಬ್ಲ್ಯೂ:1

ದಿನಾಂಕಃ 17.**12.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಡಿ ಎಂ ಎಸ್ ವಕೀಲರಿಂದಃ

ಇಂದು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಸಾಕ್ಷ್ಯ ಪ್ರಮಾಣಪತ್ರದ ಎಲ್ಲಾ ವಿಚಾರಗಳು ಸತ್ಯವಾಗಿವೆ. ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಈ ಕೆಳಕಂಡ ದಾಖಲಾತಿಗಳನ್ನು ಹಾಜರು ಮಾಡಿರುತ್ತೇನೆ.

ಅಲಭ್ಯ ಪ್ರಮಾಣಪತ್ರವನ್ನು ಹಾಜರು ಮಾಡಿದ್ದು ಅದನ್ನು ನಿಪಿ:1 ಎಂದು ಗುರುತಿಸಲಾಯಿತು. ನನ್ನ ಕುಟುಂಬದ ವಂಶವೃಕ್ಷದ ನೋಟರೀ ಪ್ರಮಾಣಪತ್ರವನ್ನು ಹಾಜರು ಮಾಡಿದ್ದು ಅದನ್ನು ನಿಪಿ:2 ಎಂದು ಗುರುತಿಸಲಾಯಿತು. ಮೃತ ಪುಟ್ಟದೇವಮ್ಮರವರ ಪಡಿತರ ಚೀಟಿಯ ನೋಟರಿ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 3 ಎಂದು, 10 ಆಧಾರ್ ಕಾರ್ಡ್ ನ ಪ್ರಮಾಣೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ:4 ರಿಂದ 13 ಎಂದೂ, ಒಂದು ಪ್ಯಾನ ಕಾರ್ಡಿನ ನೋಟರಿ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 14 ಎಂದು, ಎರಡು ಪತ್ರಿಕಾ ಪ್ರಕಟಣೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿಃ 15 ಮತ್ತು 16 ಎಂದು, ನನ್ನ ತಂದೆಯ ತಂದೆ ಶಿವರುದ್ರಪ್ಪನವರ ಹೆಸರಿನಲ್ಲಿರುವ ಮಾಡುವಿನಬೀಡು ಗ್ರಾಮದ ಸರ್ವೇ ನಂ. 38/2, 75/2 ಮತ್ತು 87/4 ರ ಪಹಣಿ ಪತ್ರಿಕೆಗಳ ದೃಡೀಕೃತ ಪ್ರತಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 17 ರಿಂದ 19 ಎಂದು ಗುರುತಿಸಲಾಯಿತು.

ಅರ್ಜಿಯಲ್ಲಿ ಕೇಳಿದಂತೆ ಆದೇಶ ಮಾಡುವಂತೆ ಕೇಳಿಕೊಳ್ಳುತ್ತೇನೆ.

ಪಾಟೀಸವಾಲುಃ ಎದುರುದಾರರು ಏಕಪಕ್ಷೀಯವಾದ ಕಾರಣ ಪಾಟೀಸವಾಲು ಇಲ್ಲಾ ಎಂದು ಪರಿಗಣಿಸಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.